ಮಂಗಳೂರು ವಿಶ್ವವಿದ್ಯಾನಿಲಯ
MANGALORE UNIVERSITY

ಕ್ರಮಾಂಕ/No. ಎಂಯು/ಎಸಿಸಿ/ಯುಜಿ-ಕ್ಯಾಲ್/ಸಿಆರ್1/2022-23/ಎ6

ಕುಲಸಚಿವರಕಛೇರಿ
ಮಂಗಳಗಂಗೋತ್ರಿ – 574 199
Office of the Registrar
Mangalagangothri – 574 199
ದಿನಾಂಕ/Date: 15/11/2022

## ಸುತ್ತೋಲೆ

ವಿಷಯ: ಶೈಕ್ಷಣಿಕ ವರ್ಷ 2022-23ನೇ ಸಾಲಿನ ಪ್ರಥಮ ವರ್ಷದ ಸ್ನಾತಕ ಕಾರ್ಯಕ್ರಮಗಳ ಪ್ರವೇಶಾತಿ ದಿನಾಂಕವನ್ನು ವಿಸ್ತರಿಸುವ ಕುರಿತು.

ಉಲ್ಲೇಖ: 1) ಸರ್ಕಾರದ ಪತ್ರ ಸಂಖ್ಯೆ: ಇಡಿ 300 ಯುಎನ್ಇ 2022, ಬೆಂಗಳೂರು, ದಿನಾಂಕ: 14-11-2022.
2) ಈ ಕಚೇರಿ ಸುತ್ತೋಲೆ ಸಮಸಂಖ್ಯೆ ದಿನಾಂಕ: 25-10-2022.
3) ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ: 15-11-2022.

*****

ಉಲ್ಲೇಖ (1)ರ ಸರ್ಕಾರದ ಆದೇಶದಂತೆ, ಉಲ್ಲೇಖ (2)ರ ಸುತ್ತೋಲೆಗೆ ಮುಂದುವರಿಕೆಯಾಗಿ ಶೈಕ್ಷಣಿಕ ವರ್ಷ 2022-23ನೇ ಸಾಲಿನ ಪ್ರಥಮ ವರ್ಷದ ಬಿ.ಎಸ್ಸಿ ಮತ್ತು ಬಿ.ಸಿ.ಎ ಕಾರ್ಯಕ್ರಮಗಳಿಗೆ ಮಾತ್ರ ಅನ್ವಯಿಸುವಂತೆ ಪ್ರವೇಶಾತಿಗೆ ಕಾಲಾವಕಾಶವನ್ನು ದಿನಾಂಕ: 25-11-2022ವರೆಗೆ ವಿಸ್ತರಿಸಲಾಗಿದೆ.

ಮುಂದುವರಿದು, ಈಗಾಗಲೇ ಸಂಯೋಜನೆ ನೀಡಲಾದ ಬಿ.ಕಾಂ/ಬಿ.ಬಿ.ಎ/ಬಿ.ಬಿ.ಎಮ್ ಸ್ನಾತಕ ಕಾರ್ಯಕ್ರಮಗಳಿಗೆ ಅನ್ವಯಿಸುವಂತೆ ಮಾತ್ರ **ಕಮರ್ಷಿಯಲ್ ಪ್ರಾಕ್ಟೀಸ್ (ಕನ್ನಡ ಮತ್ತು ಇಂಗ್ಲೀಷ್) ನಾನ್-ಇಂಜಿನಿಯರಿಂಗ್** ಕಾರ್ಯಕ್ರಮದ ವಿದ್ಯಾರ್ಥಿಗಳಿಗೆ ಲ್ಯಾಟರಲ್ ಎಂಟ್ರಿ ಮೂಲಕ 2ನೇ ವರ್ಷ/ 3ನೇ ಸೆಮಿಸ್ಟರ್ ಬಿ.ಕಾಂ/ಬಿ.ಬಿ.ಎ/ಬಿ.ಬಿ.ಎಮ್ ಸ್ನಾತಕ ಕಾರ್ಯಕ್ರಮಗಳ ಪ್ರವೇಶಾತಿ ಕಾಲಾವಕಾಶವನ್ನು ದಿನಾಂಕ: 25-11-2022ರವರೆಗೆ ವಿಸ್ತರಿಸಲಾಗಿದೆ ಎಂದು ಈ ಮೂಲಕ ತಿಳಿಸಲಾಗಿದೆ.

ಈ ಮೇಲ್ಕಂಡ ಪ್ರವೇಶಾತಿ ವಿಸ್ತರಣೆಯು ಈ ಕೆಳಕಂಡ ಷರತ್ತಿಗೊಳಪಟ್ಟಿರುತ್ತದೆ:

- ಅಸ್ತಿತ್ವದಲ್ಲಿರುವ ತರಗತಿಗಳು ಮತ್ತು ಕಾರ್ಯಕ್ರಮಗಳಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳತಕ್ಕದ್ದು.
- ತರಗತಿಗಳು, ಪ್ರಾಯೋಗಿಕ ಪರೀಕ್ಷೆ ಅಥವಾ ಲಿಖಿತ ಪರೀಕ್ಷೆಗಳನ್ನು ಬದಲಾಯಿಸುವಂತಿಲ್ಲ ಮತ್ತು ಮುಂದೂಡುವುವಂತಿಲ್ಲ. ಉನ್ನತ ಶಿಕ್ಷಣ ಇಲಾಖೆಯು ಹೊರಡಿಸಿರುವ ವೇಳಾಪಟ್ಟಿಯನ್ವಯ ಕಟ್ಟುನಿಟ್ಟಾಗಿ ಅನುಸರಿಸತಕ್ಕದ್ದು.
- ಅಸ್ತಿತ್ವದಲ್ಲಿರುವ ಯಾವುದೇ ಕಾರ್ಯಕ್ರಮಗಳಿಗೆ ತೊಂದರೆಯಾಗದಂತೆ ನೋಡಿಕೊಳ್ಳತಕ್ಕದ್ದು.

ಕುಲಸಚಿವರು

ರಿಗೆ,

1) ಕುಲಸಚಿವರು (ಪರೀಕ್ಷಾಂಗ), ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
2) ಮಂಗಳೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಟ್ಟ ಸಂಯೋಜಿತ, ಘಟಕ ಹಾಗೂ ಸ್ವಾಯತ್ತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
3) ಪ್ರೊ. ಹೆಚ್. ಎಲ್. ಶಶಿರೇಖಾ, ನೋಡಲ್ ಅಧಿಕಾರಿ, UUCMS, ಮಂಗಳೂರು ವಿಶ್ವವಿದ್ಯಾನಿಲಯ (ಲೆಕ್ಚರ್ ಕಾಂಪ್ಲೆಕ್ಸ್), ಮಂಗಳಗಂಗೋತ್ರಿ- **ದಿನಾಂಕ: 25-11-2022ವರೆಗೆ ವಿದ್ಯಾರ್ಥಿಗಳಿಗೆ ಸದರಿ ಕಾರ್ಯಕ್ರಮಗಳಿಗೆ ಪ್ರವೇಶಾತಿ ಮಾಡಿಕೊಳ್ಳಲು UUCMS Portalನಲ್ಲಿ ಅವಕಾಶ ಕಲ್ಪಿಸುವಂತೆ ತಿಳಿಸಲಾಗಿದೆ.**
4) ಎ4/ಎ5/ಎ7/ಎ8/ಎ9/ಎ10 ವಿಷಯ ನಿರ್ವಾಹಕರು, ಶೈಕ್ಷಣಿಕ ವಿಭಾಗ, ಕುಲಸಚಿವರ ಕಚೇರಿ, ಮಂಗಳೂರು ವಿಶ್ವವಿದ್ಯಾನಿಲಯ.